**ಬೀದರ್ ಜಿಲ್ಲೆಯ ಮಾಂಜ್ರಾ ನದಿಯಿಂದ ಆಂದ್ರಕ್ಕೆ ನೀರು ಹರಿದು ಹೋಗುತ್ತಿರುವ ವಿಷಯದ ಬಗ್ಗೆ**

1412 (1673) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಮಾಂಜ್ರಾ ನದಿಯಿಂದ ನೀರು ನೆರೆ ರಾಜ್ಯದ ಆಂಧ್ರ ಪ್ರದೇಶಕ್ಕೆ ಹರಿದು ಹೋಗುತ್ತಿರುವುದರಿಂದ ಈ ನದಿಗೆ 5 ಬ್ಯಾರೇಜ್ ಕಟ್ಟಲು ಸರ್ಕಾರವು ನೀಡಿರುವ ಅನುಮತಿ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ;

ಆ) ಈ ಯೋಜನೆಯನ್ನು ಎಂದು ಪ್ರಾರಂಭಿಸಲಾಗುವುದು ಹಾಗೂ ಎಂದೂ ಪೂರ್ಣಗೊಳಿಸಲಾಗುವುದು;

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ ನದಿಗೆ ಆಡ್ಡಲಾಗಿ 5 ಬ್ಯಾರೇಜುಗಳ ಬದಲಾಗಿ ತಾಂತ್ರಿಕ ಸಲಹಾ ಸಮಿತಿಯವರು 1/10/2001ರಲ್ಲಿ ಜರುಗಿದ ಎಂ.ಐ.ಸಿ. ಸಭೆಯಲ್ಲಿ ನಿರ್ಣಯಿಸಿದ್ದು ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

ಆ) ಮೇಲಿನ ಪ್ರಶ್ನೆಗೆ ಉತ್ತರಿಸಿರುವ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು, ಇದರಲ್ಲಿರುವ ಭ್ರಷ್ಟಾಚಾರ**

1414 (1677) ಶ್ರೀ ಪೂಜಾರ್ ಪಿ.ಹೆಚ್. (ಬಾಗಲ ಕೋಟೆ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು, ಇವರಲ್ಲಿ ವ್ಯಾಪಕ ಪ್ರಮಾಣದ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹಾಗೂ ಪ್ರಸಕ್ತ ನಿಗಮದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳಿಂದ ಮಹಿಳಾ ಸ್ವಯಂ ಸಂಸ್ಥೆಗಳಿಗೆ ನ್ಯಾಯ ಹೊರಕುತ್ತಿಲ್ಲವೆಂದು ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ ದೂರು ನೀಡಿದ್ದು ನಿಜವೆ?

ಆ) ಹಾಗಿದ್ದಲ್ಲಿ ಅಲ್ಲಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗವನ್ನು ವರ್ಗಾಯಿಸಿ ಪಕ್ಷ ಸಿಬ್ಬಂದಿಯನ್ನು ನೇಮಿಸಲಾಗುವುದೇ?

ಇ) ಹಾಗಿದ್ದಲ್ಲಿ ಎಂದು ನೇಮಿಸಲಾಗುವುದು? (ವಿವರ ನೀಡುವುದು)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ನಿಗಮದಲ್ಲಿ ಭ್ರಷ್ಟಾಚಾರ ಪ್ರಕರಣದ ಬಗ್ಗೆ ಯಾವೊಂದು ದೂರು ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದಿಂದ ಬಂದಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

**ಹುಲಸೂರು ಮತಕ್ಷೇತ್ರದಲ್ಲಿ ನಾಲಾ ಟ್ರೈನಿಂಗ್ ಕಾರ್ಯಕ್ರಮ**

1415 (1652) ಶ್ರೀ ರಾಜೇಂದ್ರ ವರ್ಮಾ (ಹುಲ್‌ಸೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಲಸೂರು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಘಾಟ್ ಬೋರಾಳ್ ಗ್ರಾಮದ ನಾಲಾ ನೀರಿನಿಂದ ಪ್ರತಿ ವರ್ಷ ಸುಮಾರು 1000 ಎಕರೆ (ಒಂದು ಸಾವಿರ) ಎಕರೆ ಜಮೀನು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;